International Journal of Kannada Research 2017; 3(3): 78-80

International Journal of Kannada Research
www.kannadajournal.com

**ISSN: 2454–5813**
IJKR 2017; 3(3): 78-80
© 2017 IJKR
www.kannadajournal.com
Received: 14-05-2017
Accepted: 15-06-2017

**ರಾಮರೆಡ್ಡಿ ಕೆ**
ಸಹಾಯಕ ಪ್ರಾಧ್ಯಾಪಕ
ಕೆ. ಎಲ್. ಇ. ಸಂಸ್ಥೆಯ, ಎಸ್. ವಿ. ಎಸ್. ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ–೫೯೧೧೨೬. ಬೆಳಗಾವಿ ಜಿಲ್ಲೆ

**Correspondence**
**ರಾಮರೆಡ್ಡಿ ಕೆ**
ಸಹಾಯಕ ಪ್ರಾಧ್ಯಾಪಕ
ಕೆ. ಎಲ್. ಇ. ಸಂಸ್ಥೆಯ, ಎಸ್. ವಿ. ಎಸ್. ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ–೫೯೧೧೨೬. ಬೆಳಗಾವಿ ಜಿಲ್ಲೆ

# ಡಾ. ಬಿ. ಆರ್. ಅಂಬೇಡ್ಕರರ ವಿಚಾರಗಳಲ್ಲಿ ಕೃಷಿ ಮತ್ತು ನೀರಾವರಿ

**ರಾಮರೆಡ್ಡಿ ಕೆ**

ಭಾರತವು ಕೃಷಿ ಪ್ರಧಾನ ದೇಶ. ರೈತ ದೇಶದ ಬೆನ್ನೆಲುಬು ಎಂದೆಲ್ಲ ಹೇಳಿಕೊಳ್ಳುವವರ ಮಧ್ಯೆ ನಾವಿಂದು ನಮ್ಮ ದೇಶದ ಕೃಷಿಭೂಮಿ ಮತ್ತು ನೀರಾವರಿ ವ್ಯವಸ್ಥೆಯನ್ನು ಕುರಿತು ಪುನರಾವಲೋಕನ ಮಾಡಿಕೊಳ್ಳಬೇಕಾಗಿದೆ. ಡಾ. ಬಿ.ಆರ್.ಅಂಬೇಡ್ಕರ್ ಅವರು ತಮ್ಮ ಕಾಲಮಾನವನ್ನು ಮೆಟ್ಟಿ ಎತ್ತರಕ್ಕೆ ಬೆಳೆದು ನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯವಾದಿಯಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾದರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಸಾಧನೆ ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವನಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ.

ಡಾ. ಅಂಬೇಡ್ಕರರು ಪ್ರಾಚೀನ ಕಾಲದ ಕೃಷಿ ಮತ್ತು ಜನಜೀವನವನ್ನು ಕರಾರುವಕ್ಕಾಗಿ ಹೀಗೆ ದಾಖಲಿಸುತ್ತಾರೆ. ನಮ್ಮ ಪೂರ್ವಜರು ಗ್ರಾಮೀಣ ಜೀವನದ ಬದುಕು ಬದುಕಿದ್ದರು. ಪ್ರತ್ಯೇಕ ಮನೆಗಳಿರಲಿಲ್ಲ. ಅವಿಭಕ್ತ ಕುಟುಂಬಗಳಲ್ಲಿ ಜೀವಿಸುತ್ತಿದ್ದರು. ಕೃಷಿಯು ಅತ್ಯುನ್ನತ ವೃತ್ತಿಯಾಗಿತ್ತು. ಜನಪದರ ಗಾದೆ ಮಾತಿನಂತೆ ಮೊದಲ ಸ್ಥಾನ ಕೃಷಿ, ವ್ಯಾಪಾರಿಗಳು ದ್ವಿತೀಯ ಸ್ಥಾನದಲ್ಲಿಯೂ, ಸೈನಿಕರು ಅಥವಾ ನೌಕರಸ್ಥರು ಸಾಮಾಜಿಕ ಅಂತಸ್ತಿನಲ್ಲಿ ಕೊನೆಯ ಸ್ಥಾನದಲ್ಲಿದ್ದರು. ಈ ಚಿತ್ರಣವನ್ನು ಗಮನಿಸಿದರೆ ವಾಸ್ತವವಾಗಿ ಪ್ರಾಚೀನ ಕಾಲದಲ್ಲಿದ್ದ ಸಾಮಾಜಿಕ ವ್ಯವಸ್ಥೆಯು ಇಂದು ತಿರುವುಮುರುವಾಗಿರುವದು ಕಂಡುಬರುತ್ತದೆ.

ಭೂಮಿಯನ್ನು ರೈತ ಮತ್ತು ಅವನ ಕುಟುಂಬಸ್ಥರು ಉಳುಮೆ ಮಾಡುತ್ತಿದ್ದರು. ಕೆಲವು ಬಾರಿ ಸಂಬಳದ ಕಾರ್ಮಿಕರಿಂದ ಕೃಷಿ ಮಾಡಿಸುತ್ತಿದ್ದರು. ಭೂಮಿ ಮಾರುವದೆಂದರೆ ಭಾವನಾತ್ಮಕವಾಗಿ ಸಾಧ್ಯವಿರಲಿಲ್ಲ. ಆದರೂ ಭೂಮಿಯನ್ನು ಕೃಷಿ ಗೇಣಿಗೆ ನೀಡಿದ್ದನ್ನು ನಾವು ಕಾಣಬಹುದು. ಸ್ವತಂತ್ರ ಭೂಮಾಲೀಕನು ಗೌರವಕ್ಕೆ ಪಾತ್ರನಾಗಿರುತ್ತಿದ್ದನು. ಆದರೆ ವಿಪರ್ಯಾಸವೆಂದರೆ ಬಂಡವಾಳಶಾಹಿಯ ತೋಟದಲ್ಲಿ ಕೆಲಸ ಮಾಡುವ ಜನಗಳನ್ನು ಅಗೌರವದಿಂದ ಕಾಣಲಾಗುತ್ತಿತ್ತು. ಆದರೂ ಗ್ರಾಮೀಣ ಸಮುದಾಯದಲ್ಲಿ ಊಳಿಗಮಾನ್ಯ ಪದ್ಧತಿ ಅಸ್ತಿತ್ವದಲ್ಲಿತ್ತೋ ಇಲ್ಲವೋ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದಕ್ಕೆ ಯಾವ ಪುರಾವೆಗಳಿಲ್ಲ ಎಂದು ದಾಖಲಿಸುತ್ತಾರೆ.

ಕೃಷಿಯು ಸಾಮಾನ್ಯ ವೃತ್ತಿಯಾಗಿರುವ ಸಮಯದಲ್ಲಿ, ಬ್ರಾಹ್ಮಣನು ಕೂಡ ತನ್ನ ಜಾತಿಯನ್ನು ತ್ಯಜಿಸದೆ ಮೇಕೆ ಕಾಯುವದಾಗಲಿ ಇಲ್ಲವೆ ಚಿಕ್ಕ ಹಾಗೂ ದೊಡ್ಡ ಭೂಮಾಲೀಕನಾಗಿ ಕಾಣಿಸಿಕೊಳ್ಳಬಹುದಾಗಿತ್ತು. ಕೃಷಿಯ ಕುರಿತು ಇದ್ದ ಮೋಹವು ಪುರಾತನ ಗ್ರೀಕರಿಗಿದ್ದುದಕ್ಕಿಂತಲೂ ಹೆಚ್ಚಾಗಿತ್ತು ಎಂದು ಅಂಬೇಡ್ಕರರು ಹೇಳುತ್ತಾರೆ. ಅಂದರೆ ದೊಡ್ಡ ದೊಡ್ಡ ಭೂಮಾಲೀಕತ್ವದ ಉದಯದ ಸೂಚನೆಗಳನ್ನು ಡಾ. ಅಂಬೇಡ್ಕರರು ನೀಡುತ್ತಾರೆ.

ಸಮಕಾಲೀನ ಸಂದರ್ಭವನ್ನು ಗಮನಿಸಿದ ಅಂಬೇಡ್ಕರರು ಭಾರತದಲ್ಲಿನ ಸಣ್ಣ ಹಿಡುವಳಿಗಳ ಕುರಿತಾಗಿ ಗಂಭೀರ ಚಿಂತನೆಗೈದಿದ್ದಾರೆ. ಇಂಗ್ಲೆಂಡ್‌ಗಳಲ್ಲಿ ದೊಡ್ಡ ಹಿಡುವಳಿ ಭೂಮಿಯನ್ನು ಕೃಷಿಕರು ಹೊಂದಿದ್ದರೆ, ಫ್ರಾನ್ಸ್ ಕ್ರಾಂತಿ ತರುವಾಯದಲ್ಲಿ ಸಣ್ಣ ಹಿಡುವಳಿಗಳ ದೇಶವಾಗಿದೆ. ಇದೇ ರೀತಿ ಹಾಲೆಂಡ್ ಮತ್ತು ಡೆನ್ಮಾರ್ಕ ಕೂಡ ಸಣ್ಣ ಹಿಡುವಳಿಗಳ ದೇಶ. ಇಲ್ಲಿ ಪಾಶ್ಚಾತ್ಯ ದೇಶಗಳ ಭೂ ಹಿಡುವಳಿಗಳನ್ನು ಆಧಾರವಾಗಿಟ್ಟುಕೊಂಡು ನಮ್ಮ ದೇಶದ ಭೂಹಿಡುವಳಿಯನ್ನು ಲೆಕ್ಕ ಹಾಕಲಾಗಿಬಹಳಷ್ಟು ಅಂತರವನ್ನು ಕಾಣಬಹುದಾಗಿದೆ ಎಂದು ಅಂಬೇಡ್ಕರರು ದಾಖಲಿಸುತ್ತಾರೆ.

ಕ್ಷೀಣಿಸುತ್ತಿರುವ ಹಿಡುವಳಿಗಳ ಗಾತ್ರ ಭಾರತದ ಕೃಷಿಗೆ ಅತ್ಯಂತ ಹಾನಿಕರವೆಂದು ಹೇಳಲಾಗುತ್ತಿದೆ. ಸಣ್ಣ ಹಿಡುವಳಿಗಳಲ್ಲಿ ಅನೇಕ ಸಮಸ್ಯೆಗಳಿವೆಯೆಂದು ಗುರುತಿಸಲಾಗಿತ್ತು. ಈ ಚಿಕ್ಕ ಹಿಡುವಳಿಗಳು ಅಚ್ಚುಕಟ್ಟಾಗಿದ್ದರೆ ಅಥವಾ ಒಂದುಗೂಡಿದವುಗಳಾಗಿದ್ದರೆ ಸಮಸ್ಯೆಗಳು ಎಷ್ಟೋ ಕಡಿಮೆಯಾಗಿರುತ್ತಿದ್ದವು. ಚಿಕ್ಕ ಚಿಕ್ಕ ಹಿಡುವಳಿಗಳಾದರೆ ಆಗುವ ನಷ್ಟಗಳು ಅಪಾರವಾದುದು. ಶ್ರಮದ ಮತ್ತು ದನಗಳ ಶಕ್ತಿಯ ಹಾನಿ, ಅವಶ್ಯಕವಾಗಿ ಬೇಲಿ ಮತ್ತು ಬದುವಿನ ನಿರ್ಮಾಣ ಮತ್ತು ಗೊಬ್ಬರದ ನಷ್ಟದ ಪರಿಣಾಮವನ್ನು ಲೆಕ್ಕಿಸುತ್ತಾರೆ. ಇದರಿಂದ ಬೆಳೆಗಳ ರಕ್ಷಣೆ, ಬಾವಿಗಳನ್ನು ತೋಡುವುದು ಮತ್ತು ಶ್ರಮದ ಉಳಿತಾಯದ ಸಾಧನೆಗಳ ಬಳಕೆ ಅಸಾಧ್ಯವಾಗುವುದು. ಇದರಿಂದ ಸಾಗುವಳಿಯಲ್ಲಿ ಬದಲಾವಣೆಗಳನ್ನು ಮಾಡುವುದು, ರಸ್ತೆಗಳ, ಕಾಲುವೆಗಳ ನಿರ್ಮಾಣ ಮುಂತಾದವು ಕಷ್ಟವಾಗುವುದಲ್ಲದೆ ಉತ್ಪಾದನೆಯ ವೆಚ್ಚವೂ ಹೆಚ್ಚುವುದು ಎಂದು ಅಭಿಪ್ರಾಯಪಡುತ್ತಾರೆ.

ಹಾಗಾದರೆ ನಮ್ಮ ಹಿಡುವಳಿಗಳು ಎಷ್ಟಿರಬೇಕು ಎಂಬುದನ್ನು ವೈಜ್ಞಾನಿಕವಾಗಿ ಹೇಳುತ್ತಾರೆ. 'ಒಂದು ಮಾದರಿ ಲಾಭದಾಯಕ ಹಿಡುವಳಿ ಎಂದರೆ ೩೦ ರಿಂದ ೫೯ ಬಿಘಾಗಳ ಭೂಮಿ ಒಂದೇ ಘಟಕದಲ್ಲಿದ್ದು ಕೊನೆಪಕ್ಷ ಒಂದು ನೀರಾವರಿ ಬಾವಿ ಮತ್ತು ಆ ಹಿಡುವಳಿಯಲ್ಲಿಯೇ ಇರುವ ಒಂದು ಮನೆಯನ್ನು ಹೊಂದಿರಬೇಕೆಂದು ಹೇಳುತ್ತಾರೆ. ಈ ರೀತಿಯಿದ್ದಾಗ ಮಾತ್ರ ಒಬ್ಬ ರೈತ ಉತ್ತಮವಾದ ಕೃಷಿಯನ್ನು ಮಾಡುತ್ತ ಉತ್ತಮವಾದ ಜೀವನನ್ನು ನಡೆಸಬಹುದೆಂದು' ಅಭಿಪ್ರಾಯಪಡುತ್ತಾರೆ. ಇನ್ನು ಕೃಷಿ ವಿಸ್ತರಣೆಗೆ ಅವರದೇ ಆದ ಮಾದರಿಯನ್ನು ಅಮೇರಿಕದಿಂದ ಆಯ್ದುಕೊಳ್ಳುತ್ತಾರೆ. ಜಮೀನಿನ ಸಮೀಪದಲ್ಲಿಯೇ ಕಾರ್ಖಾನೆಯಿದ್ದರೆ ಆ ಜಮೀನಿನ ಮತ್ತು ಅದರ ಬೆಳೆಯ ಬೆಲೆ ಹೆಚ್ಚುತ್ತದೆಂದು ಅಂಕಿ ಅಂಶಗಳ ಮೂಲಕ ಆಧಾರವನ್ನು ನೀಡುತ್ತಾರೆ.

ಇನ್ನು ಡಾ. ಅಂಬೇಡ್ಕರರು ೧೯೪೨-೪೬ರ ಅವಧಿಯ ಬ್ರಿಟಿಷ್ ಮಂತ್ರಿಮಂಡಲದಲ್ಲಿ ಕಾರ್ಮಿಕ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳ ಮುಖ್ಯಸ್ಥರಾಗಿದ್ದರು. ಆಗ ದಾಮೋದರ್ ಕಣಿವೆ ಯೋಜನೆ, ಸೋನ್ ನದಿ ಯೋಜನೆ ಹಾಗೂ ಮಹಾನದಿ ಯೋಜನೆಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಒಂದು ನದಿ ಕಣಿವೆಯನ್ನು ಒಂದು ಜಲ ಘಟಕವನ್ನಾಗಿ, ಇಡೀ ಪ್ರದೇಶವನ್ನು ಪ್ರಾದೇಶಿಕ ಘಟಕವನ್ನಾಗಿ ಪರಿಗಣಿಸಿ ಯೋಜನೆ ರೂಪಿಸುವ ಮೂಲಕ ಪ್ರತಿ ಹನಿ ನೀರನ್ನು ಸಮರ್ಥವಾಗಿ ಗರಿಷ್ಠವಾಗಿ ಬಳಸಿಕೊಳ್ಳಬಹುದು ಎಂಬುದು ಅವರ ಚಿಂತನೆಯಾಗಿತ್ತು.

ಆಯಾ ಪ್ರದೇಶದ ಭೂಮಿ, ಸಾರ, ಹವಾಮಾನಗಳನ್ನು ಆಧರಿಸಿ ಮತ್ತು ಲಭ್ಯವಿರುವ ನೀರಿನ ಗರಿಷ್ಟ ಬಳಕೆಯ ಸಾಧ್ಯತೆಯನ್ನು ಗಮನದಲ್ಲಿರಿಸಿಕೊಂಡು ಬೆಳೆ ಮತ್ತು ಕೃಷಿ ಪದ್ಧತಿಯನ್ನೂ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಕೃಷಿಯು ಹಿಂದಿನದಕ್ಕಿಂತ ಇನ್ನೂ ಅತ್ಯಂತ ಸಂಕೀರ್ಣವಾದ ಬಳಕೆ, ತಾಳಿಕೆ ಸಮಸ್ಯೆಗಳನ್ನು ಎದುರಿಸುತ್ತಿರುವ ಇಂದಿನ ಸಂದರ್ಭದಲ್ಲೂ ಈ ಪರಿಕಲ್ಪನೆ ಅತ್ಯುತ್ತಮ ಮಾದರಿಯಾಗಿದೆ.

ಆದರೆ ಅಂಬೇಡ್ಕರ್ ಅವರ ಜಲನೀತಿ ಮತ್ತು ನದಿನೀರು ಹಂಚಿಕೆ ನೀತಿಗಳನ್ನು ಅವರ ಕೃಷಿ ಮತ್ತು ಆರ್ಥಿಕ ನೀತಿಗಳಿಂದ ಹೊರಗಿಟ್ಟೂ ನೋಡಲು ಸಾಧ್ಯವಿಲ್ಲ. ಅವರ ಬರಹಗಳಲ್ಲಿ ಅವರು ದೇಶದ ಕೃಷಿ ಸಮಸ್ಯೆ ಬಗೆಹರಿಯಬೇಕೆಂದರೆ ಕೃಷಿ ರಾಷ್ಟ್ರೀಕರಣವಾಗಬೇಕೆಂದು ಪ್ರತಿಪಾದಿಸುತ್ತಾರೆ. ಅದಿಲ್ಲದೆ ದೊಡ್ಡ ಭೂ ಮಾಲೀಕ ಮತ್ತು ಸಣ್ಣ ರೈತರು ಕೂಡಿರುವ ಗ್ರಾಮಗಳ ಕೃಷಿ ಘಟಕವು ದಿನೇದಿನೇ ಸಣ್ಣ ರೈತರನ್ನು ಹಾಗೆಯೇ ಕೃಷಿ ರಂಗವನ್ನು ದಿವಾಳಿ ಎಬ್ಬಿಸುತ್ತದೆ ಎಂದೂ ಸಹ ಅವರು ಪ್ರತಿಪಾದಿಸಿದ್ದರು.

ಕೊನೆಯದಾಗಿ ಅಂಬೇಡ್ಕರ್ ಅವರು ರೂಪಿಸಿದ ಸುಲಭ ಮಾರ್ಗಗಳನ್ನು ಹೀಗೆ ಗುರುತಿಸಬಹುದು.

1. ನೀರು ಮತ್ತು ನದಿ ಒಂದು ಅಪೂರ್ವವಾದ ಮತ್ತು ಎಲ್ಲರಿಗೂ ಸೇರಬೇಕಾದ ಸಂಪನ್ಮೂಲ ಮತ್ತು ಒಂದು ಕೃಷಿ ಆಧಾರಿತ ದೇಶದಲ್ಲಿ ಅದರ ಸಂಪೂರ್ಣ ಮತ್ತು ಸದ್ಬಳಕೆ ಅತ್ಯಗತ್ಯ.
2. ನೀರು ಬಳಕೆಯ ಕುರಿತಾದ ನೀತಿ ಪ್ರಧಾನವಾಗಿ ಈ ದೇಶದ ಅತ್ಯಂತ ಕೆಳಗಿನ ಹಂತದಲ್ಲಿರುವ ಜನತೆಯ ಜೀವನ ಮಟ್ಟವನ್ನು ಸುಧಾರಿಸುವುದೇ ಆಗಿರಬೇಕು.
3. ಅಂತರರಾಜ್ಯ ನದಿಗಳ ಬಗ್ಗೆ ಯೋಜನೆಯನ್ನು ರೂಪಿಸುವಾಗ ನೀರಾವರಿ, ವಿದ್ಯುತ್ ಮತ್ತು ಜಲಮಾರ್ಗ ಅಭಿವೃದ್ಧಿ ಎಂಬ ಬಹು ಉಪಯೋಗಿ ನದಿ ಯೋಜನೆಗಳನ್ನು ರೂಪಿಸಬೇಕು.
4. ಅಂತರರಾಜ್ಯ ನದಿ ನೀರು ಹಂಚಿಕೆ ಮಾಡಿಕೊಳ್ಳುವಾಗ ಇಡೀ ನದಿ ಕಣಿವೆಯನ್ನು ಒಂದು ಸಮಗ್ರ ಏಕ ಜಲಘಟಕವನ್ನಾಗಿ ಪರಿಗಣಿಸಿ ಯೋಜನೆಯನ್ನು ರೂಪಿಸಿಕೊಳ್ಳಬೇಕು.
5. ಅದಕ್ಕಾಗಿ ಅಂತರ ರಾಜ್ಯ ನದಿ ನೀರಿನ ಬಳಕೆಯ ಬಗ್ಗೆ ಸ್ಥಳೀಯ (local) ದೃಷ್ಟಿಕೋನವನ್ನು ತೊರೆದು. ಪ್ರಾದೇಶಿ (regional) ಅರ್ಥಾತ್ ನದಿ ನೀರು ಹರಿವ ಅಷ್ಟೂ ರಾಜ್ಯಗಳ ಪ್ರದೇಶವನ್ನು ಒಂದು ಪ್ರಾದೇಶಿಕ ಘಟಕವನ್ನಾಗಿ ಭಾವಿಸುವ ಧೋರಣೆಯನ್ನು ಬೆಳೆಸಿಕೊಳ್ಳಬೇಕು
6. ಹಾಗೂ ಅಂಥ ನದಿ ನೀರಿನ ನಿರ್ವಹಣೆ, ಬಳಕೆ ಇತ್ಯಾದಿಗಳನ್ನು ಗಮನಿಸಿಕೊಳ್ಳಲು ಒಂದು ಪ್ರಾದೇಶಿಕ ನದಿ ನೀರು ನಿರ್ವಹಣಾ ನಿಗಮನವನ್ನು ರಚಿಸಿಕೊಳ್ಳಬೇಕು.
7. ಅದಕ್ಕೆ ಬೇಕಿರುವ ತಾಂತ್ರಿಕ ಪರಿಣಿತಿ, ಇತ್ಯಾದಿಗಳನ್ನು ಕೇಂದ್ರವೇ ಒದಗಿಸಬೇಕು.
8. ಇದರಿಂದ ಆಗುವ ಅಭಿವೃದ್ಧಿಯ ಫಲವು ಅಗ್ಗದ ನೀರು, ಧಾನ್ಯ, ವಿದ್ಯುತ್ ಜಲಮಾರ್ಗಗಳ ರೂಪದಲ್ಲಿ ದೇಶದ ಕಟ್ಟಕಡೆಯ ಜನರಿಗೆ ದಕ್ಕಬೇಕು.

ಈ ಹಿನ್ನೆಲೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಯಲ್ಲಿ ಕೃಷಿ ಮತ್ತು ನೀರಾವರಿಯ ದೂರದೃಷ್ಟಿಯು ಸಮಕಾಲೀನ ಸಂದರ್ಭದಲ್ಲಿ ಸಮಯೋಚಿತವಾಗಿತ್ತು. ಒಂದು ದೃಷ್ಟಿಯಿಂದ ಪ್ರಸ್ತುತ ನಮ್ಮ ದೇಶದ ನೀರಾವರಿ ಮತ್ತು ಕೃಷಿಯ ಶಾಶ್ವತವಾದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಡಾ. ಬಿ. ಆರ್. ಅಂಬೇಡ್ಕರ್ ಅವರ ಚಿಂತನೆಗಳು ಸೂಕ್ತ ದಾರಿದೀಪವಾಗಬಲ್ಲವು.

**ಆಕರ ಗ್ರಂಥಗಳು**


1. ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು: ಸಂಪುಟ ೧. ಪ್ರ- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಪ್ರಾಧಿಕಾರ, ಬೆಂಗಳೂರು.
2. ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು: ಸಂಪುಟ ೧೧. ಪ್ರ- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಪ್ರಾಧಿಕಾರ, ಬೆಂಗಳೂರು.
3. ಅಂಬೇಡ್ಕರ್ ಚಿಂತನೆಗಳ ಪ್ರವೇಶಿಕೆ: ಅಂಬೇಡ್ಕರ್ ಅಧ್ಯಯನ

ಕೇಂದ್ರ, ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು.

4. ಶ್ರೀ ಶಿವಸುಂದರ್, ಕನ್ನಡ ಪ್ರಭ: ಪುಟ-೦೭. ದಿನಾಂಕ: ೨೨-೦೯-೨೦೧೬

5. B.R. Ambedkar and his philosophy of Land Reform: An evaluation-Ishita Aditya Ray, Sarbapriya Ray Afro Asian Journal of Social Sciences, Quarter I. 2011; 2(2):1.